T-2-2

Reg No B G 155 23 - 1 - 1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೀವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ ಎಸ್. ಕೃಷ್ಣರಾವ್ [2 ಪೈಸೆ

ಮೈಸೂರುನಗರದಲ್ಲಿ ತಮಿಳು ವಿರೋಧಿ ಚಳುವಳಿ

ಮೈಸೂರು ನಗರದಲ್ಲಿ ಈ ದಿನ ಮಧ್ಯಾಹ್ನ ಹಠಾತ್ತನೆ ತಮಿಳು ವಿರೋಧಿ ಚಳುವಳಿ ಆರಂಭವಾಗಿ, ತಮಿಳು ವಿರೋಧಿಗಳ ಭಾರಿ ಮೆರವಣಿಗೆ ನಡೆಯಿತು.

ಮೆರವಣಿಗೆಕಾರರು ತಮಿಳು ವಿರುದ್ಧ ಘೋಷಣೆಗಳನ್ನು ಕೂಗುತ್ತಾ, ಮುಖ್ಯ ರಸ್ತೆಗಳಲ್ಲಿ ಮೆರವಣಿಗೆ ಹೋದರು.

ತಮಿಳು ಚಿತ್ರಪ್ರದರ್ಶನ ನಡೆಯುತ್ತಿರುವ ಲಕ್ಷ್ಮೀ ಟಾಕೀಸ್, ಪ್ರಭುದೇವಾ ಥಿಯೇಟರಿನ ಮೇಲೆ ತಮಿಳುವಿರೋಧಿಗಳು ದಾಳಿ ಮಾಡಿ ಬೋರ್ಡುಗಳನ್ನು ಕಿತ್ತರು.

ಆಪೇರಾ ಟಾಕೀಸ್ ಬಳಿ ಗುಂಪು ನುಗ್ಗಿದಾಗ ಪೋಲೀಸರು ಲಘು ಪ್ರಹಾರ ಮಾಡಿ ಚದುರಿಸಿದರು.

ಚಳುವಳಿಗೆ ಕಾರಣ

ಮೈಸೂರು ನಗರದ ಕಾಲೇಜೊಂದರ ಹತ್ತಿರ ಕನ್ನಡಕ್ಕೆ ಧಿಕ್ಕಾರ ಎಂದು ಬರೆಯಲಾಗಿತ್ತೆಂದು, ಇದೇ ಹಠಾತ್ತನೆ ಜಳುವಳಿ ಕೂಪಗೊಳ್ಳಲು ಕಾರಣವಾಯಿತೆಂದು ಹೇಳಲಾಗಿದೆ. ಮೈಸೂರು ಪೌರಸಭೆ ಶತಮಾನೋತ್ಸವ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಮೈಸೂರು ಕಲಾವಿದರಿಗೆ ಆಹ್ವಾನನೀಡದೆ ತಮಿಳು ನಾಡು ಕಲಾವಿದರಿಗೆ ಆಹ್ವಾನನೀಡದದು ಈ ಚಳುವಳಿಗೆ ಕಾರಣವಿರಬಹುದೆಂದು ಹೇಳಲಾಗಿದೆ.

★

ಎಲ್ ಐ ಸಿ ನೆರವು

ಮದರಾಸು— ಈ ವರ್ಷದ ಎಲ್ ಐ ಸಿ ಬಂಡವಾಳದ ಹಣ ರೂ. 150 ಕೋಟಿಯಲ್ಲಿ, ರೂ. 45 ಕೋಟಿ ಗ್ರಾಮಾಂತರಗಳ ವಿದ್ಯುದ್ದೀಪ, ವಸತಿ ಸೌಕರ್ಯ, ಭೂ ಅಡಮಾನ ಬ್ಯಾಂಕುಗಳ ಮೂಲ್ಕ ವ್ಯವಸಾಯ ಉತ್ಪಾದನೆಗೆ ಉಪಯೋಗಿಸಲಾಗುವೆಂದು ಎಲ್ ಐ ಸಿ ಕಂರ್ಪೊರೇಷನ್ ಕಾರ್ಪೊರೇಷನ್ ಅಧ್ಯಕ್ಷ ಶ್ರೀ ಭಿಡೇಯವರು ಹೇಳಿದರು.

ಮೈಸೂರು ಪೌರಸಭೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿ

ತಿಮಯ್ಯ ಮತ್ತು ಶಿವಣ್ಣ ಆಯ್ಕೆ

ಕಾತುರಕ್ಕೆ ಅವಕಾಶ ಮಾಡಿದ್ದ ಮೈಸೂರು ಪೌರಸಭೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಚುನಾವಣೆ ಈ ಮಧ್ಯಾಹ್ನ ನಡೆಯಿತು

ಪುರಸಭೆ ಚುನಾವಣೆ ಆದಂದಿನಿಂದ, ವಿರೋಧ ಪಕ್ಷದ ಕೆಲವು ಓಟುಗಳು ಕಾಂಗ್ರೆಸ್ ಉಮೇದುವಾರರಿಗೆ ಬಿದ್ದು ಕಾಂಗ್ರೆಸ್ ಉಮೇದುವಾರರು ಗೆಲ್ಲುವರೆಂಬ ವದಂತಿ ಕಾಡಿಬ್ಬಿನಂತೆ ಹರಡಿತ್ತು. ಆದರೆ ವಿರೋಧ ಪಕ್ಷದವರ ಓಟುಗಳು ಅವರ ಅಭ್ಯರ್ಥಿಗಳಿಗೆ ಹೋದವು.

ಜಿಲ್ಲಾಧಿಕಾರಿಗಳು ಮತ್ತು ಚುನಾವಣಾಧಿಕಾರಿಗಳು ಆದ ಶ್ರೀ ಸಿಂಗ್‌ರವರು ಚುನಾವಣೆ ನಡೆಸಿದರು.

ಅಧ್ಯಕ್ಷತೆಗೆ ಸ್ಪರ್ಧಿಸಿದ್ದ ಸಂಯುಕ್ತ ರಂಗದ ಅಭ್ಯರ್ಥಿ ಶ್ರೀ ಎಂ. ಎಸ್. ತಿಮ್ಮಯ್ಯನವರಿಗೆ 20 ಮತಗಳು, ಕಾಂಗ್ರೆಸ್ ಅಭ್ಯರ್ಥಿ ಶ್ರೀ ಸ್ತೋಪುಸುಂದರಂರಿಗೆ 15 ಮತಗಳು ಬಂದು ಚುನಾವಣಾಧಿಕಾರಿಗಳು ಶ್ರೀ ತಿಮ್ಮಯ್ಯನವರ ಆಯ್ಕೆಯನ್ನು ಘೋಷಿಸಿದರು.

ಉಪಾಧ್ಯಕ್ಷತೆಗೆ ಸ್ಪರ್ಧಿಸಿದ್ದ ಸಂಯುಕ್ತ ರಂಗದ ಸ್ಪರ್ಧಿ ಶ್ರೀ ಎಂ. ಶಿವಣ್ಣನವರಿಗೆ 20 ಮತಗಳು ಕಾಂಗ್ರೆಸಿನ ಶ್ರೀ ಹೊಟ್ಟಪ್ಪನವರಿಗೆ 15 ಮತಗಳು ಬಂದು ಚುನಾವಣಾಧಿಕಾರಿಗಳು ಶ್ರೀ ಶಿವಣ್ಣನವರ ಆಯ್ಕೆಯನ್ನು ಘೋಷಿಸಿದರು.

●

ಮನೆ ಖರೀದಿಗೆ ಇದೆ

ಮೈಸೂರು ಇಟ್ಟಿಗೆಗೂಡು ಅರುಣಾಚಲಂ ರಸ್ತೆಯ 1 ನೇ ಕ್ರಾಸ್‌ನಲ್ಲಿ ಮನೆ ಖರೀದಿಗಿದೆ. ತಕ್ಷಣ ಸುಸ್ಥಿತಿಗೆ ಕೊಡಲಾಗುವುದು.

– ವಿವರಗಳಿಗೆ ಇಲ್ಲಿ ವಿಚಾರಿಸಿ –

ಎಂ. ಕೆ. ಸುಕುಂದರಾವ್, ಬಿಎ, ಬಿಎಲ್

1067 ಚಾಮರಾಜಪುರಂ,

ಸತ್ಯವಾದಿ ಆಫೀಸ್, ಮೈಸೂರು - 4.

ಡಾ. ದಾಸ್

ಡಾ|| ಬಿ ಜಿ ದಾಸ್‌ರವರು ಮೈಸೂರು ಪೌರಸಭೆಗೆ ಆಯ್ಕೆ ಆಗದೆ ಇರುವ ನಷ್ಟವನ್ನು ಅಧ್ಯಕ್ಷ ಚುನಾವಣೆ ವೀಕ್ಷಣೆಗೆ ಆಗಮಿಸಿದ್ದ ಹಿರಿಯಮೋರ್ವರು ವ್ಯಕ್ತಪಡಿಸಿದರು. ಜನರಿಗಾಗಿ ಅವರ ಮಟ್ಟದಲ್ಲಿ ಹೋರಾಡುವ ಜನ ಇಲ್ಲಿ ಯಾರಿದ್ದಾರೆ ನೋಡಬೇಕು ಎಂದು ಅವರು ತಿಳಿಸಿದರು.

★

ತೆಲಂಗಾಣ ಚಳವಳ

ಹೈದರಾಬಾದು— ತೆಲಂಗಾಣ ಚಳವಳದಲ್ಲಿ ಚಳವಳಗಾರರು ಎರಡು ಸಾಮಾನು ರೈಲು ಗಾಡಿಯನ್ನು ಸುಟ್ಟು, ರೈಲ್ವೇ ಸಲಕರಣೆಗಳನ್ನು ನಷ್ಟಪಡಿಸಿದರು – ಅನೇಕ ಕಡೆ ರೈಲು ಒಡಾಟವನ್ನು ಆತಂಕಪಡಿಸಿದರು - ಚಳವಳ ಹೆಚ್ಚು ಹರಡುತ್ತಿದೆ – ಅಲನಾಲಃ ಸ್ಟೇರ್ಷ ಮೇಲೆ 400 ವಿದ್ಯಾರ್ಥಿಗಳು ಧಾಳಿ ನಡೆಸಿ ತುಂಬಾ ನಷ್ಟಪಡಿಸಿದರು – 32 ವಿದ್ಯಾರ್ಥಿಗಳ ದಸ್ತಗಿರಿಯಾಗಿದೆ – 15 ದಿನಗಳಿಂದ ಉಪವಾಸ ಆಚರಿಸುತ್ತಿದ್ದ ವಿದ್ಯಾರ್ಥಿ ರವೀಂದ್ರ ಉಪವಾಸ ನಿಲ್ಲಿಸಿದನು – ಉಸ್ಮಾನಿಯಾ ವಿಶ್ವವಿದ್ಯಾಲಯ ಭಾಗದಲ್ಲಿ ನಡೆಸಿದ ಪ್ರತಿಭಟನಾ ಸಭೆಯಲ್ಲಿ ವಿಶ್ವವಿದ್ಯಾನಿಲಯದ 6000 ನಾಗರಿಕರೂ ಸೇರಿದ್ದರು.

ಸ್ವಾರಸ್ಯದಲ್ಲಿ ಸ್ವಾರಸ್ಯ

ಶಿವಮೊಗ್ಗಾ— ಹಾಲುಲಕ್ಕವಳ್ಳಿಯಲ್ಲಿ 2 ವರ್ಷದಿಂದ ಸ್ಕೂಲು ಕೆಲಸಮಾಡುತ್ತಿಲ್ಲದಿದ್ದರೂ, ಉಪಾಧ್ಯಾಯರು ಸ್ಕೂಲು ಕಟ್ಟಡವನ್ನು ಈಶ್ವರಪ್ಪ ಎನ್ನುವವರಿಗೆ ಬಾಡಿಗೆಗೆ ಕೊಟ್ಟಿದ್ದರೆಂದೂ, ಮತ್ತು ತಾವು ಸಲೀಸಾಗಿ ಸಂಬಳ ಪಡೆಯುತ್ತಿರುವರೆಂದೂ ಹೊರಪಟ್ಟಿದೆ.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆನೆವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ. ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತಿಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ, ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವ ವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'

ಚಾಮರಾಜಪುರಂ, ಮೈಸೂರು 4.

ಸಕ್ಕರೆ ಸ್ಕೂಲು

ಬೆಂಗಳೂರು— ಧಾರವಾಡದ ಮೊರಬ್ಬಾ ಗ್ರಾಮದ ಒಂದು ಸ್ಕೂಲಿನ ಹೆಸರು "ಸಕ್ಕರೆ ಸ್ಕೂಲು" ಎಂದಾಗಿದೆ; ವಿಧಾನ ಪರಿಷತ್ತಿನಲ್ಲಿ ಶ್ರೀ ವೈ. ಎಸ್. ಪಾಟೀಲರು ಈ ರೀತಿ ವಿವರಿಸಿದರು— ಗ್ರಾಮದಲ್ಲಿ ಯಾರೂ ಸಕ್ಕರೆಯನ್ನು ಹತೋಟಿ ದರದಲ್ಲಿ ಪಡೆಯಲಿಲ್ಲವೆಂದೂ ಗ್ರಾಮಕ್ಕೆ ನಿಗದಿಯಾಗಿದ್ದ ಸಕ್ಕರೆಯನ್ನು ಕಾಳಸಂತೆಯಲ್ಲಿ ಮಾರಲಾಗುತ್ತಿತ್ತೆಂದೂ, ಆ ಹಣದ ಒಂದು ಭಾಗ ಈ ಸ್ಕೂಲಿನ ಸ್ಥಾಪನೆಗೆ ಉಪಯೋಗಿಸಲಾದ್ದರಿಂದ ಈ ಹೆಸರು ಬಂದಿತೆಂದೂ ಹೇಳಿದರು.

●

ಅವಿಶ್ವಾಸ ಸೂಚನೆ

ಬೆಂಗಳೂರು— ಶಾಸನಸಭೆಯಲ್ಲಿ ಸರಕಾರದ ಮೇಲಿನ ಅವಿಶ್ವಾಸ ಸೂಚನೆಯು ಬಿದ್ದುಹೋಯಿತು.

ವಿಮೋಚನಾ ಚಳವಳ

ಪಾಲಘಾಟು— ಕೇರಳ ರಾಜ್ಯದಲ್ಲಿ ಸಂಯುಕ್ತ ರಂಗವನ್ನು ಹೊರದೂಡಲು ಎರಡನೇ ವಿಮೋಚನಾ ಚಳವಳವು ಕ್ಷಿಪ್ರದಲ್ಲೇ ಹೂಡಲಾಗುವುದೆಂದು ಕೇರಳ ಪ್ರಾದೇಶಿಕ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಾವಾ ಹೇಳಿದರು.

○

ವಿದ್ಯಾರ್ಥಿಗಳ ಗುಂಪಿನಲ್ಲಿ ಹೊಡೆದಾಟ

ಹುಬ್ಬಳಿ— ಕನ್ನಡ ಮತ್ತು ಮರಾಠಿ ವಿದ್ಯಾರ್ಥಿಗಳ ಗುಂಪಿನಲ್ಲಾದ ಘರ್ಷಣೆಯನ್ನು ಒಬ್ಬ ಪೋಲೀಸು ಅಧಿಕಾರಿ ಮತ್ತು ಕೆಲವು ವಿದ್ಯಾರ್ಥಿಗಳು ಗಾಯಗೊಂಡರು.

★

ಗುಲ್ಬರ್ಗ— ರಾಜ್ಯಮಟ್ಟದ 'ಮೈಸೂರು ಮುನ್ನಡೆ" ವಸ್ತುಪ್ರದರ್ಶನವನ್ನು ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಫೆಬ್ರವರಿ 1 ರಂದು ಉದ್ಘಾಟಿಸುವರು.



Help The Gorakshana

SHAKTI
SUDHA

A Superb Tonic

ಆಶೋಕ ಏಜೆನ್ಸೀಸ್
ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು
ಎಲ್ಲ ವಿಧ ಆಯುರ್ವೇದ ಔಷಧಗಳಿಗೂ ಪ್ರಮುಖ ಕೇಂದ್ರ

Quality Printing — Neat Binding
Lakshminarasimha Press
Sivarampet, Mysore

ವುಡ್‌ಲ್ಯಾಂಡ್ಸ್ ಜಯಪ್ರದ 2ನೇ ವಾರ

.... ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಆಮ್ನಾಮ್

ತಾರಾಗಣ— ಶಶಿ ಕಪೂರ್, ಶರ್ಮಿಳಾ ಟಾಗೋರ್, ಪ್ರೇಂ ಛೋಪ್ರ
ರಾಜೇಂದ್ರನಾಥ್, ಮದನಪುರಿ — ಸಂಗೀತ: ಕಲ್ಯಾಣ್‌ಜೀ ಆನಂದ್‌ಜೀ

[ದಿನ 3 ಪ್ರದರ್ಶನಗಳು]

ಆಪೆರಾ— 24-1-69 ರಿಂದ

— ಅತ್ಯಮೋಘ ತಮಿಳು ಚಿತ್ರ —

ಬಳಿವಿಳಕ್ಕು

ಎಂ. ಜಿ. ರಾಮಚಂದ್ರನ್ ನಾಗೇಶ್ ಜಯಲಲಿತ

.... ದಿನವಹಿ 3ಆಟಗಳು ....

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow). Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and graeing the occasion with presence, are fervently solicited with grateful thanks.

Editor, 'Satyavadi' Chamarajapuram, Mysore-4.

Protect the Cow

Edited, Printed Published by Dharmapracharo Nirata M S Krishna Rao (Proprietor) at the Satyavadi Press Chamarajapuram, Mysoe 4